ದಿಂದ ಕೇಳಿಕೊಳ್ಳುತ್ತಿದ್ದೇನೆ. ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಈ ಮನೆಯ ಕಾರ್ಯ ಕಲಾಪಗಳಲ್ಲಿ ಭಾಗವಹಿಸಿ ಸರ್ಕಾರದ ಮೇಲೆ ತಮ್ಮ ಅಸ್ತ್ರಗಳನ್ನು ಬಿಟ್ಟರೆ, ಸರ್ಕಾರ ಅವುಗಳನ್ನು ಎದುರಿಸಿ ಉತ್ತರ ಕೊಡಲಿಕ್ಕೆ ಸರಿಯಾಗುತ್ತದೆ.

ಶ್ರೀ ಎಂ.ಎಸ್. ಕೃಷ್ಣನ್.—ಮಾತುಕತೆ ನಡೆದಾಗ ಏನು ನಡೆಯಿತು ಎಂಬುದು ಅವರಿಗೂ ಗೊತ್ತಿದೆ. ಬಾವಿಯಲ್ಲಿ ಕಂಳಿತಿರತಕ್ಕವರು ಮೇಲೆ ಬರಲಿಕ್ಕೆ ಏನು ಮಾಡಬೇಕೆಂಬುದರ ಬಗ್ಗೆ ಚರ್ಚೆಯಾಗಿದೆ. ಅದರ ಬಗ್ಗೆ ಇವತ್ತಿನ ದಿವಸ ತೀರ್ಮಾನ ಮಾಡಿ. ಸಂಧಾನದ ಮುಖಾಂತರ ದೊಡ್ಡ ಮನಸ್ಸು ಮಾಡಿ, ಸಂಧಾನ ಮಾಡಿದರೆ ಸಮಸ್ಯೆ ಬಗೆ ಹರಿಯುತ್ತದೆ. ನೀವು ಇದ್ದೀರಿ ಮಾನ್ಯ ರಾಚಯ್ಯನವರು ಇದ್ದಾರೆ. ಪರಿಣತರಿದ್ದೀರಿ, ವಿಷಯ ತಿಳಿದಂತಹ ಜನ, ಅನುಭವ ಇರುವವರು ನೀವು ಈ ರೀತಿ ಮಾಡುತ್ತೀರಿ ಎಂದರೆ ಹೇಗೆ? ಮಾನ್ಯ ನಾರಾಯಣಕುಮಾರ್‌ರವರು ಹೇಳಿದರೆ ಬೇರೆ ಸಮಾಚಾರ, ಇಷ್ಟೆಲ್ಲ ಗೊತ್ತಾಗುವುದಿಲ್ಲವೆಂದು ಹೇಳಬಹುದು, ಅವರು ಸಹ ಒಳ್ಳೆಯವರು, ಆದಲ್ಲ ಪ್ರಶ್ನೆ. ನೀವು ಈ ರೀತಿ ಹಠ ಹಿಡಿದರೆ ಹೇಗೆ? ಅದರ ಬಗ್ಗೆ ಯೋಚನೆ ಮಾಡಿ ತೀರ್ಮಾನ ಮಾಡಿ.

ಶ್ರೀ ಜೆ. ನಾರಾಯಣಕುಮಾರ್.—ವಿರೋಧಪಕ್ಷದವರು ಬಾವಿಯೊಳಗೆ ಸೇರಿಕೊಂಡಿದ್ದಾರೆ. ದುರ್ಯೋಧನ ಭೀಮ ಬರುತ್ತಾನೆಂದು ವೈಶಂಪಾಯನ ಸರೋವರದಲ್ಲಿ ಸೇರಿಕೊಂಡ ಹಾಗೆ ಸೇರಿಬಿಟ್ಟಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಆ ಕಡೆಯಲ್ಲೂ ಹಿರಿಯ ಸದಸ್ಯರು ಇದ್ದಾರೆ ಅನುಭವಿಗಳು ಅಲ್ಲೂ ಇದ್ದಾರೆ ಇಲ್ಲೂ ಇದ್ದಾರೆ. ಒಂದು ನಿರ್ಣಯ ತೆಗೆದುಕೊಳ್ಳಬೇಕಾದರೆ ಎರಡೂ ಕಡೆಯ ಸದಸ್ಯರು ಸೇರಬೇಕು. ನಾನು ಆ ವಿಚಾರ ಚರ್ಚೆ ಮಾಡುವುದಿಲ್ಲ, ಆ ವಾದ ಬೇಡ, ನಾನು ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ ಮಾನ್ಯ ವಿರೋಧಪಕ್ಷದವರು ತಮ್ಮ ತಮ್ಮ ಸ್ಥಾನಗಳಿಗೆ ಬರಬೇಕು. ಅದಕ್ಕೆ ಮಾನ್ಯ ಕೃಷ್ಣನ್‌ರವರು ಸಹಕಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಸಭೆಯ ಕಾರ್ಯಕಲಾಪ ನಡೆಯಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ನಾವು ಎಷ್ಟು ಮಾತನಾಡಿದರೂ ಸಹ ನಾವು ಹೀಗೆಯೇ ಈ ಮನೆಯನ್ನು ನಡೆಸಿಕೊಂಡು ಹೋಗುತ್ತೇವೆಂದರೆ ನಾವೇನು ಮಾಡುವುದು? ಈ ಕಡೆಯವರು ಮಾಡಿರುವುದು ನೂರಕ್ಕೆ ನೂರರಷ್ಟು ಸರಿಯೆಂದು ನಾನು ಹೇಳುವುದಿಲ್ಲ. ತಪ್ಪುಗಳು ಆಗುತ್ತವೆ, ಮಾಡುತ್ತೇವೆ, ಅದನ್ನು ಸಮಯ ಸಂದರ್ಭ ಬಂದಾಗ ಮಾತನಾಡೋಣ. ಆ ಕಡೆಯವರು ಸಹ ನೂರಕ್ಕೆ ನೂರರಷ್ಟು ಸರಿ ಇದ್ದಾರೆಂದು ನಾನು ಹೇಳುವುದಿಲ್ಲ. ನಿನ್ನೆ ದಿವಸ ಮಾನ್ಯ ಸೀಧ್ಹಾರವರು ಧೈರ್ಯ ಮಾಡಿ ಒಳ್ಳೆಯ ಭಾಷಣದಲ್ಲಿ ಹೇಳಿದ್ದಾರೆ. ಪಶ್ಚಾತ್ತಾಪ ಪಡುತ್ತೇನೆ, ಏನೋ ಕೋಪದಲ್ಲಿ ಆಯಿತು ಎಂದು ಹೇಳಿದರು. ಅವರು ಆ ರೀತಿ ಹೇಳಿದರೆ ನಾನು ಇಲ್ಲಿಯೇ ಇದ್ದೆ. ನೂರಕ್ಕೆ ನೂರರಷ್ಟು ಯಾರು ಸರಿ ಇರುವುದಿಲ್ಲ ಆಗಿರುವುದನ್ನು ಸರಿಪಡಿಸಿಕೊಂಡು ಆಮೇಲೆ ಚರ್ಚೆ ಮುಂದುವರಿಸೋಣ. ಮೊದಲನೆಯದು ಕರ್ತವ್ಯ ಎನ್ನುವುದು ತಪ್ಪು ಕಲ್ಪನೆ. ಮೊದಲನೆ ಕರ್ತವ್ಯ ನಾರ್ಮಲ್‌ಸಿಯನ್ನು ಏನಿದೆ ಅದನ್ನು ರೆಸ್ಯೂರ್ ಮಾಡುವುದು. ಎರಡನೆಯ ಕರ್ತವ್ಯ ಡಿಮಾಂಡ್ಸ್‌ಗಳ ಬಗ್ಗೆ ಎಲ್ಲರೂ ಚರ್ಚೆ ಮಾಡಿ ಅವುಗಳನ್ನು ಪಾಸ್ ಮಾಡತಕ್ಕದ್ದು. ಚರ್ಚೆಯಲ್ಲಿ ಎಲ್ಲರೂ ಭಾಗವಹಿಸಬೇಕು. ನೀವು ಮೊದಲನೆಯ ಕರ್ತವ್ಯವನ್ನು ಚ್ಯುತಿ ಮಾಡಿ, ಎರಡನೇ ಕರ್ತವ್ಯ ದೊಡ್ಡ ಕರ್ತವ್ಯ ಅದನ್ನು ಮಾಡುತ್ತೇವೆಂದರೆ ಅದು ನ್ಯಾಯ ಆಗುವುದಿಲ್ಲ, ಇಂತಹದ್ದನ್ನು ನಾವು ಒಪ್ಪಿಕೊಳ್ಳುವುದಿಲ್ಲ ಸ್ವಾಮಿ. ನಾವು ಇದಕ್ಕೆ ಪ್ರತಿಭಟನೆ ತೋರಿಸಿ ವಾಕ್‌ಔಟ್ ಮಾಡಿ ಸಭೆಯಿಂದ ಹೊರಗಡೆ ಹೋಗುತ್ತೇವೆ, ದಯವಿಟ್ಟು ನಮ್ಮನ್ನು ಕ್ಷಮಿಸಿ.

ಶ್ರೀ ಪಂಪಾಪತಿ.—ಈ ರೀತಿ ಸರ್ಕಾರದವರು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕಾರ್ಯ ಕಲಾಪ ನಡೆಸುತ್ತಿರುವುದು ಸರಿಯಾದುದಲ್ಲ. ಇದು ನಿಜವಾಗಿಯೂ ನಮ್ಮ ರಾಜ್ಯದ ಜನತೆಗೆ ಅವಮಾನ ಮಾಡಿದಂತಾಗುತ್ತದೆ ಆದ್ದರಿಂದ ನಾನು ಈ ಸಂದರ್ಭದಲ್ಲಿ ನಮ್ಮ ನಾಯಕರ ಜೊತೆಯಲ್ಲಿ ಸಭ್ಯತಾಗ ಮಾಡುತ್ತೇನೆ.

(ಸಿ.ಪಿ.ಐ ಮತ್ತು ಸಿ.ಪಿ.ಐ.(ಎಂ.) ಸದಸ್ಯರುಗಳೆಲ್ಲರೂ ಸಭಾತ್ಯಾಗ ಮಾಡಿದರು)